ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳನ್ನು ವಿದ್ಯಾಭ್ಯಾಸಕ್ಕೆ ತೊಂದರೆ ಆಗದಂತೆ ಸಮೀಪದ ಶಾಲೆಗಳಿಗೆ ದಾಖಲು ಮಾಡಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

ತುರುವೇಕರೆ ತಾಲ್ಲೂಕಿನಲ್ಲಿ ಆಶ್ರಯ ಮನೆಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1144(1402)

ಸದಸ್ಯರ ಹೆಸರು: ಶ್ರೀ ಲಕ್ಷ್ಮೀನಾರಾಯಣ.ಎಂ.ಡಿ(ಅಣ್ಣಯ್ಯ)

ಉತ್ತರಿಸುವ ಸಚಿವರು: ಶ್ರೀ ಖಮರುಲ್ ಇಸ್ಲಾಂ(ವಸತಿ ಸಚಿವರು)

ಪ್ರಶ್ನೆ

ಅ. ತುರುವೇಕೆರೆ ತಾಲ್ಲೂಕಿನಲ್ಲಿ ಆಶ್ರಯ ಮನೆಗಳ ಫಲಾನುಭವಿಗಳು ಹೆಚ್ಚಾಗಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಹಾಗಿದ್ದಲ್ಲಿ ಈ ವರ್ಷ ಹೆಚ್ಚಿನ ಸಂಖ್ಯೆಯಲ್ಲಿ ಮನೆಗಳನ್ನು ಕೊಡಲು ಕ್ರಮ ಕೈಗೊಳ್ಳಲಾಗುವುದೇ?

ಉತ್ತರ

ಅ. ಹೌದು.

ಆ. ಪ್ರಸಕ್ತ ಸಾಲಿನಲ್ಲಿ ತುರುವೇಕೆರೆ ತಾಲ್ಲೂಕಿಗೆ ಗ್ರಾಮೀಣ ಆಶ್ರಯ ಯೋಜನೆಯಲ್ಲಿ 480 ಮನೆಗಳ ಗುರಿಯನ್ನು ನಿಗದಿಪಡಿಸಲಾಗಿದೆ. ಹೊಸ ಗ್ರಾಮದ ವಿಸ್ತರಣೆಗಳಿಗಾಗಿ 150 ಮನೆಗಳನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಖಾಸಗಿ ಪ್ರಥಮ ದರ್ಜೆ ಅನುದಾನಿತ ಕಾಲೇಜುಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1145(1407)

ಸದಸ್ಯರ ಹೆಸರು: ಶ್ರೀ ಲಮಾಣಿ ರುದ್ರಪ್ಪ ಮಾನಪ್ಪ(ಬ್ಯಾಡಗಿ)

ಉತ್ತರಿಸುವ ಸಚಿವರು: ಡಾ॥ ಜಿ.ಪರಮೇಶ್ವರ(ಉನ್ನತ ಶಿಕ್ಷಣ ಮತ್ತು ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

ಪ್ರಶ್ನೆ

ಅ) ಕರ್ನಾಟಕ ರಾಜ್ಯದ ಖಾಸಗಿ ಪ್ರಥಮ ದರ್ಜೆ ಅನುದಾನಿತ ಕಾಲೇಜುಗಳಲ್ಲಿ 1977ರಿಂದ 01-03-2000ರವರೆಗಿನ ಇದ್ದ ಬೋಧಕ ಮತ್ತು ಬೋಧಕೇತರ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಖಾಸಗಿ ಆಡಳಿತ ಮಂಡಳಿಗಳು ಮೇಲ್ಕಂಡ ಅವಧಿಯಲ್ಲಿ ಅನುದಾನ ಪಡೆಯುವಾಗ ಮುಂದೆ ಉದ್ಭವಿಸುವ ಹುದ್ದೆಗಳನ್ನು ಮೀಸಲಾತಿ ಆಧಾರದ ಮೇಲೆ ತುಂಬುತ್ತೇವೆ ಎಂದು ಇಲಾಖೆಗಳಿಗೆ ಮುಚ್ಚಳಿಕೆ ಬರೆದುಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) 01-03-2001ರ ಆದೇಶ ಹೊರಡಿಸಿದ ತಾರೀಖಿಗೆ ಖಾಲಿ ಇದ್ದ ಎಲ್ಲ ಹುದ್ದೆಗಳನ್ನು ಫ್ರೀಜ್ ಮಾಡಿ ಆದೇಶ ಹೊರಡಿಸಿರುವುದರಿಂದ ಮೀಸಲಾತಿ ನಿಯಮಗಳನ್ನು ಉಲ್ಲಂಘಿಸಿದಂತಾಗಲಿಲ್ಲವೇ? ಇದನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಉತ್ತರ

ಅ) ಬೋಧಕ ಹುದ್ದೆಗಳು - 321

ಬೋಧಕೇತರ ಹುದ್ದೆಗಳು - 682

ಆ) ಹೌದು.

ಇ) ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಖಾಸಗಿ ಅನುದಾನಿತ ಕಾಲೇಜುಗಳಿಗೆ ಶೇ. 15ರಷ್ಟು ಅನುದಾನವನ್ನು ಕಡಿತಗೊಳಿಸುವ ಹಿನ್ನಲೆಯಲ್ಲಿ ಖಾಲಿ ಇರುವ ಎಲ್ಲಾ ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ಶಾಶ್ವತ ಅನುದಾನ ರಹಿತವೆಂದು ಹಾಗೂ ಇಂತಹ ಹುದ್ದೆಗಳು ಸರ್ಕಾರದಿಂದ ಅನುದಾನ ಪಡೆಯಲು ಅನರ್ಹವೆಂದು ಹಾಗೂ ಅಂತಹ ಹುದ್ದೆಗಳನ್ನು ಆಡಳಿತ ಮಂಡಳಿಗಳು ತುಂಬಿಕೊಂಡು ಅವರ ಸ್ವಂತ ಸಂಪನ್ಮೂಲಗಳಿಂದ ಸದರಿ ಹುದ್ದೆಗೆ ವೇತನ ಭತ್ಯೆಗಳನ್ನು ಭರಿಸಲು ದಿನಾಂಕ: 01-03-2001ರ ಸಂಖ್ಯೆ : ಇಡಿ 196 ಯುಪಿಸಿ 2000(ಭಾ) ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ. ಇದು ಸರ್ಕಾರದ ತಾತ್ವಿಕ ನಿಲುವಾಗಿದೆ.

ವಿದ್ಯಾರ್ಥಿಗಳಿಗೆ ಬೋಧನಾ ಫೀ ಮರುಪಾವತಿ